ದಿನಾಂಕ: 08.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ವಾದಿ ಪರ ವಕೀಲರಿಂದ**

1) ಈ ಕೇಸಿನಲ್ಲಿ ಏನು ತಕರಾರು ಹಾಕಿದ್ದೀರಿ ಎಂದರೆ ಸಾಕ್ಷಿಯು ಸರ್ವೆ ನಂ 292, 296, ಜಮೀನುಗಳು ನಮ್ಮದೆಂದು ಕೇಳಿರುತ್ತೇನೆ. ಸದರಿ ಜಮೀನಿನ ಹಳೆ ಸರ್ವೆ ನಂಬರ ಹೇಳಲು ಬರುವುದಿಲ್ಲ. ಸರ್ವೆ ನಂ 292 , 296 ಮೊದಲು ಖಾತುನಬಿಗೆ ಅವರಿಗೆ ಸೇರಿದಂತ ಜಮೀನು ಎಂದರೆ ಸರಿಯಲ್ಲ. ಸದರಿ ಜಮೀನು ಯಾಸಿನಖಾನನಿಗೆ ಸೇರಿರುತ್ತದೆ. ಖಾತುನಬಿ ಮಗಳು ಹುಸೇನಬಿ ಎಂದರೆ ಹುಸೆನಬಿಯ ಮಗಳು ಖಾತುನಬಿ ಎಂದು ಉತ್ತರಿಸುತಾರೆ. ಸದರಿ ಜಮೀನುಗಳು ಮೊದಲು ಹುಸೇನಬಿಗೆ ಇದ್ದು, ನಂತರ ಖಾತುನಬಿಗೆ ಬಂದಿದೆ ಎಂದರೆ ಸರಿಯಲ್ಲ. ಯಾಸೀನಖಾನನಿಗೆ ಸದರಿ ಜಮೀನುಗಳು ಯಾವ ರೀತಿ ಬಂದಿದೇ ಎಂದರೆ ಹುಸೇನಬಿ ಸದರಿ ಜಮಿನುಗಳನ್ನು ಯಾಸಿನಖಾನನಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ 2 ಜಮೀನುಗಳು ಮೊದಲು ಹುಸೇನಬಿ ಸೇರಿದ್ದವು ಎಂದರೆ ಸರಿ. ಹುಸೇನಬಿ ಮತ್ತು ಯಾಸಿನಖಾನನಿಗೆ ರಕ್ತ ಸಂಬಂದ ಇಲ್ಲ ಎಂದರೆ ಸರಿ. ಹುಸೇನಬಿ ಅವರು ಸದರಿ ಜಮೀನುಗಳನ್ನು ಯಾಸಿನಖಾನನಿಗೆ ರೂ 200 ಪಡೆದುಕೊಂಡು ಹಿಬಾಬಿಲ ಮೂಲಕ ಬಿಟ್ಟು ಕೊಟ್ಟಿರುತ್ತಾರೆ. ಯಾಸಿನಖಾನನಿಗೆ ಮಕ್ಕಳು ಇರಲಿಲ್ಲ ನನ್ನ ಅಣ್ಣನಾದ ಅಬ್ದುಲ ಅಜೀಜಗೆ ದತ್ತಕ ತೆಗೆದುಕೊಂಡಿದ್ದರು. ಅಬ್ದುಲ ಅಜೀಜಗೆ ಸದರಿ ಎರಡು ಜಮೀನುಗಳನ್ನು ತಮ್ಮ ತಂದೆಯವರಿಗೆ ಬಿಟ್ಟು ಕೊಟ್ಟಿರುತ್ತಾರೆ. ಯಾಸಿನಖಾನನಿಗೆ ಅಬ್ದುಲ ಅಜೀಜಗೆ ದತ್ತಕ ಪಡೆಯುವ ಕಾಯ್ದೆ

ಇಲ್ಲ ಎಂದರೆ ಸಾಕ್ಷಿಯು ದತ್ತಕ ಪಡೆದಿದ್ದಾರೆ ಎಂದು ಉತ್ತರಿಸುತ್ತಾರೆ. ದತ್ತಕ ಪಡೆದಿರುವ ಬಗ್ಗೆ " ಡ " ಆಗಿರುತ್ತದೆ.

2) ಖಾತುನಬಿ ಅವರ ಗಂಡ ಹುಸೇನಸಾಬ ದಾದೇಸಾಬ ದಫೇದಾರ ಇರುತ್ತದೆ. ಹುಸೇನಸಾಬನಿಗೆ ಎಷ್ಟು ಜನ ಹೆಂಡತಿಯರು ಇದ್ದರು ಎಂದು ಹೇಳಲು ಬರುವುದಿಲ್ಲ. ವಾದಿಯ ತಂದೆ ಅಸದಖಾನ ಇವರು ಹುಸೇನಬಿಯ ಮಗ ಆಗಬೇಕು. 2 ನೇ ವಾದಿ ಅಸದಖಾನನ ಮಗ ಎಂದರೆ ಸರಿ. ವಾದಿಯರು ಮತ್ತು ಮೂಲ ಪ್ರತಿವಾದಿ ನಂ 1ರ ಅಣ್ಣ ತಮ್ಮಂದಿರು ಎಂದರೆ ಸರಿ. ಸರ್ವೆ ನಂ 292, 296 ಜಮೀನುಗಳು ಹುಸೇನಬಿಗೆ ಸೇರಿದಂತ ಜಮೀನುಗಳು ಆಗಿದ್ದು, ನಂತರ ಗಂಡನ ದಫೇದಾರನಿಗೆ ಸೇರಿದ್ದು ಆಗಿದ್ದರಿಂದ ವಾದಿಯರು ಮತ್ತು 1 ನೇ ಪ್ರತಿವಾದಿ ಸದರಿ ಜಮೀನುಗಳಿಗೆ ವಾರಸುದಾರರು ಆಗುತ್ತಾರೆ ಎಂದರೆ ಸರಿಯಲ್ಲ. ಸದರಿ ಎರಡು ಜಮೀನುಗಳು ಭೂ ಸ್ವಾದೀನ ಆಗಿದೆ ಎಂದರೆ ಸರಿ. ಸದರಿ ಜಮೀನು ಸ್ವಾದೀನ ಆಗುವ ಪೂರ್ವದಲ್ಲಿ ವಾದಿಯರು ಕಬ್ಜೆಯಲ್ಲಿ ಇದ್ದರು ಎಂದರೆ ನಾವು ಇದ್ದೇವು ಎಂದು ಉತ್ತರಿಸುತ್ತಾರೆ. ಸ್ವಾದೀನ ಅಸದಖಾನನು ಪಡಿಸಿಕೊಂಡಂತಹ ಜಮೀನಿನ ಪರಿಹಾರ ಹಣ ವಾದಿಯರು ಮತ್ತು 1 ನೇ ಪ್ರತಿವಾದಿಗೆ ಬರಬೇಕೆಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂ 11 ರಲ್ಲಿ ಬರೆದಿರುವ ಎಲ್ಲ ವಿಷಯಗುಳು ಸುಳ್ಳು ಇವೆ ಎಂದರೆ ಸರಿಯಲ್ಲ. ಯಾಸಿನಖಾನನಿಗೆ ಸದರಿ ಜಮೀನುಗಳನ್ನು ಖಾತುನಬಿಗೆ ಬಿಟ್ಟು ಕೊಟ್ಟೇ ಇಲ್ಲ ಎಂದರೆ ಸರಿಯಲ್ಲ.

**ಪಾಟಿ ಸವಾಲು 8 ನೇ ಪ್ರತಿವಾದಿ ಪರ ಶ್ರೀ ಬಿ ವಿ ಪಿ ವಕೀಲರಿಂದ**

3) ಸಾಕ್ಷಿಗೆ 7 ನೇ ಪ್ರತಿವಾದಿಯ ವಕಾಲತ ನಾಮಾವನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ 7 ಮತ್ತು 9 ನೇ ಪ್ರತಿವಾದಿಯರು ಸಲ್ಲಿಸಿದಂತಹ ಪ್ರತಿವಾದ ಪತ್ರದ ವೇರಿಪಿಕೇಶ ತೋರಿಸಲಾಗಿ, ಅದರಲ್ಲಿರುವ ಸಹಿಗಳನ್ನು ನೋಡಿ ಸದರಿ ಸಹಿಗಳು ತನ್ನದಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ 7 ಮತ್ತು 9 ನೇ ಪ್ರತಿವಾದಿಯರು ಸಲ್ಲಿಸಿದಂತಹ ಪ್ರತಿವಾದ ಪತ್ರದ ಪ್ರತಿಯೊಂದು ಪುಟದಲ್ಲಿರುವ ಸಹಿಗಳನ್ನು ನೋಡಿ ತನ್ನದಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ವಕೀಲರು ಎಮ್ ಆರ್ ಇಂಡಿಕಾರ ಇರುತ್ತಾರೆ. ಸಾಕ್ಷಿಗೆ 7 ಮತ್ತು 9 ನೇ ಪ್ರತಿವಾದಿಯರು ಸಲ್ಲಿಸಿದಂತಹ ಪ್ರತಿವಾದ ಪತ್ರವನ್ನು ತೋರಿಸಲಾಗಿ, ಅದರಲ್ಲಿರುವ ವಕೀಲರ ಸಹಿಗಳನ್ನು ನೋಡಿ ಗುರುತಿಸಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ನೀವು ಬೇರೆ ಬೇರೆ ಕಚೇರಿಗಳಿಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ಬೇರೆ ಬೇರೆ ಸಹಿಗಳನ್ನು ಮಾಡುತ್ತೀರಿ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ತಾನು ಸಲ್ಲಿಸಿದಂತಹ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತೋರಿಸಲಾಗಿ, ಅದರಲ್ಲಿರುವ ಪ್ರತಿಯೊಂದು ಪುಟದಲ್ಲಿರುವ ತನ್ನ ಸಹಿಗಳನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ತಾನು ಸಲ್ಲಿಸಿದಂತಹ ವಕಾಲತ ನಾಮಾದಲ್ಲಿರುವ ಸಹಿಯನ್ನು ಮತ್ತು ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಸಹಿಗಳನ್ನು

ತೋರಿಸಿ ಬೇರೆ ಬೇರೆ ಇದೆ ಎಂದರೆ ವ್ಯತ್ಯಾಸ ಆಗಿದೆ ಎಂದು ಉತ್ತರಿಸುತ್ತಾರೆ. ಈ ರೀತಿ ಸಹಿಗಳನ್ನು ವ್ಯತಾಸ ಮಾಡಿ ಸಹಿ ಮಾಡುವ ಉದ್ದೇಶ ಏನು ಇದೆ ಎಂದರೆ 2016 ರಿಂದ ನನ್ನ ಸಹಿಗಳನ್ನು ಬದಲಾವಣೆ ಮಾಡಿರುತ್ತೇನೆ. ನಿಮ್ಮ ಸರ್ವಿಸ ರೇಕಾರ್ಡನಲ್ಲಿ ನನ್ನ ವಕಾಲತ ನಾಮಾದಲ್ಲಿ ಇರುವಂತಹ ಸಹಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಸಹಿಗಳು ಇರುತ್ತವೆ. ನಿಮ್ಮ ಪ್ರಮಾಣ ಪತ್ರದಲ್ಲಿ ಇರುವಂತಹ ವಿಷಯ ಮತ್ತು ಪ್ರತಿವಾದ ಪತ್ರದಲ್ಲಿರುವ ವಿಷಯಗಳನ್ನು ನಾನು ಮಾಹಿತಿ ಕೊಟ್ಟ ಮೇರೆಗೆ ಮಾಡಿರುತ್ತಾರೆ.

4) ಈ ದಾವಾದ ಆಸ್ತಿಯ ಬಗ್ಗೆ ವಿಜಯಪುರ ನ್ಯಾಯಾಲಯದಲ್ಲಿ ಒಂದು ದಾವೆ ಆಗಿತ್ತು ಎಂದರೆ ಸಾಕ್ಷಿಯು ಆಗಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಡಿ-16 ನ್ನು ತೋರಿಸಲಾಗಿ, 199/67 ಇದು ದಾವಾದ ನಂಬರ 73/1964 ದಾವೆ ಇತ್ತು ಎಂದರೆ ಗೊತ್ತಿಲ್ಲ. ಈ ದಾವಾದ ಎರಡು ಜಮೀನುಗಳು ಯಾಸಿನಖಾನ, ಹಾಜಿ ನುರುದ್ದೀನ, ಇವರಿಗೆ ಸೇರಿದೆ ಎಂದು ನಿರ್ದಾರ ಆಗಿದೆ ಎಂದರೆ ಸರಿ. ಯಾಸಿನಖಾನ ಅವರು ಎಂದಾದರೂ ಸಹಿ ಮಾಡಿರುವುದನ್ನು ನೋಡಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಯಾಸಿನಖಾನ ಅವರು ಅಬ್ದುಲ ಅಜೀಜಖಾನ ಅವರಿಗೆ ಎರಡು ಜಮೀನುಗಳನ್ನು ಮೃತ್ಯು ಪತ್ರದ ಪ್ರಕಾರ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿ. ಆದ್ದರಿಂದ ಅಬ್ದುಲ ಅಜೀಜನು ಅಣ್ಣ ತಮ್ಮಂದಿರು ಅಕ್ಕ ತಂಗಿಯರಿಗೆ ಸದರಿ ಜಮೀನುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಇದೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಗಾಗಲಿ ತಾಯಿಗಾಗಲಿ ಸೇರಿದಂತಹ

ಜಮೀನು ಅಲ್ಲ ಎಂದರೆ ಇದೆ ಎಂದು ಉತ್ತರಿಸುತ್ತಾರೆ. ನಿಮಗೆ ಈ ಆಸ್ತಿಗಳಲ್ಲಿ ಯಾವುದೇ ಹಕ್ಕು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಬೇದಾರನಾಗಿ ಪ್ಯಾರಾ ಮಿಲಟ್ರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ನಿಮ್ಮ ತಂದೆ ತಾಯಿಗಳ ಆಸ್ತಿ ಇದ್ದರೆ ಅಥವಾ ಯಾರಾದರು ದಾನ ಪತ್ರ, ಹಕ್ಕು ಬಿಟ್ಟು ಕೊಟ್ಟ ಮೃತ್ಯು ಪತ್ರ ಅಥವಾ ಕೋರ್ಟ ಡಿಕ್ರಿ ಇಂದ ಬಂದರೆ ಮಾತ್ರ ಹಕ್ಕು ಬರುತ್ತದೆ ಎಂದರೆ ಬರುತ್ತದೆ ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿಯನ್ನು ನಿಮ್ಮ ತಂದೆ ತಾಯಿ ಆಗಲಿ ಯಾವುದೇ ರೀತಿಯಿಂದ ವರ್ಗಾವಣೆ ಮಾಡಿಲ್ಲ ಎಂದರೆ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಜಮೀನು ಸ್ವಾಧೀನ ಆಗಿದ್ದರಿಂದ ಅವರ ಪರಿಹಾರ ಹಣ ಜಮಾ ಆಗಿದ್ದರಿಂದ ಅದನ್ನು ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,
Sd/-

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ